೩೮೬೧ (೫೯೪೧) **ಶ್ರೀ ಬಸವರಾಜು ಎ.ಎಸ್ (ಅರಸೀಕೆರೆ)** :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕುಂಬಾರ ಜನಾಂಗದ ಜನಸಂಖ್ಯೆ ಎಷ್ಟು ; ಜಿಲ್ಲಾವಾರು ವಿವರ ನೀಡುವುದು;

ಆ) ಈ ನಿಮಿತ್ತ ರಚಿಸಲಾಗಿದ್ದ ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷಾವರದಿ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಇ) ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ನೀಡಿರುವ ಮಧ್ಯಂತರ ವರದಿಯ ಶಿಫಾರಸ್ಸುಗಳ ಮುಖ್ಯಾಂಶಗಳೇನು;

ಈ) ಕಡಿಮೆ ಜನಸಂಖ್ಯೆ ಹೊಂದಿರುವ ಈ ಕುಂಬಾರ ಜನಾಂಗವನ್ನು ವರ್ಗ ೨ ಎ ಯಿಂದ ಪ್ರವರ್ಗ-೧ ಗುಂಪಿಗೆ ಸೇರ್ಪಡೆ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ಸದರಿ ಜನಾಂಗವನ್ನು ವರ್ಗ ೨-ಎ ಗುಂಪಿನಲ್ಲಿ ಸೇರಿಸಿರುವುದರಿಂದ ಬಲಿಷ್ಠ ಇತರೆ ಹಿಂದುಳಿದ ಜಾತಿ ಜನಾಂಗಗಳ ಮಧ್ಯೆ ಸದರಿಯವರಿಗೆ ನಿಜವಾದ ಸಾಮಾಜಿಕ ನ್ಯಾಯ, ನಿರ್ದಿಷ್ಟ ಮೀಸಲಾತಿ ಸಿಗದಿರುವುದು ನಿಜವೇ;

ಊ) ಹಾಗಿದ್ದಲ್ಲಿ, ಸಾಮಾಜಿಕ ನ್ಯಾಯದ ಹಿತದೃಷ್ಟಿಯಿಂದ ಈಗಲಾದರೂ ಚಿಂತಿಸಿ, ಸದರಿ ಬೇಡಿಕೆಯನ್ನು (ಪ್ರವರ್ಗ ೨ ಕ್ಕೆ ಸೇರಿಸುವ ಪ್ರಸ್ತಾಪವನ್ನು ಪರಿಗಣಿಸಲು ಸರ್ಕಾರ ಮುಂದಾಗುವುದೇ; ಇಲ್ಲದಿದ್ದಲ್ಲಿ ಕಾರಣಗಳೇನು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಶ್ರೀ ವೆಂಕಟಸ್ವಾಮಿರವರ ನೇತೃತ್ವದ ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಪ್ರಕಾರ ರಾಜ್ಯದಲ್ಲಿರುವ ಕುಂಬಾರ ಜನಾಂಗದ ಜನಸಂಖ್ಯೆಯು ೨,೫೨,೪೩೯ ಇರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹಿಂದುಳಿದ ವರ್ಗಗಳ ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕ ಮನೆಮನೆ ಸಮೀಕ್ಷಾ ಕಾರ್ಯವನ್ನು ಈ ವರ್ಷದಿಂದ ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿರುತ್ತದೆ.

ಇ) ಶಾಶ್ವತ ಹಿಂದುಳಿದ ವರ್ಗಗಳ ಆಯೋಗವು ನೀಡಿರುವ ಮಧ್ಯಂತರ ವರದಿಯನ್ನು ಸರ್ಕಾರವು ಪರಿಶೀಲಿಸುತ್ತಿದ್ದು, ಈ ಬಗ್ಗೆ ನಿರ್ಣಯ ತೆಗೆದುಕೊಂಡ ನಂತರ ಅದನ್ನು ಬಹಿರಂಗಗೊಳಿಸಲಾಗುವುದು.

ಈ) ಶಾಶ್ವತ ಆಯೋಗದ ಮಧ್ಯಂತರ ವರದಿಯ ಬಗ್ಗೆ ಸರ್ಕಾರವು ನಿರ್ಣಯ ತೆಗೆದುಕೊಂಡ ನಂತರ ಈ ಬಗ್ಗೆ ಮಾಹಿತಿಯನ್ನು ಒದಗಿಸಲಾಗುವುದು. ಆದುದರಿಂದ ಈ ಹಂತದಲ್ಲಿ ಕುಂಬಾರ ಜನಾಂಗವನ್ನು ಪ್ರವರ್ಗ-೨ ಎ ಯಿಂದ ಪ್ರವರ್ಗ – ೧ಕ್ಕೆ ಸೇರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈ ಹಂತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಇದನ್ನು ಸರ್ಕಾರವು ಪರಿಶೀಲಿಸುತ್ತದೆ.

ಅನುಬಂಧ

ಪ್ರಶ್ನೆ ಸಂಖ್ಯೆ ೩೯೪೧ ಕ್ಕೆ

ಕ್ರ.ಸಂ	ಜಿಲ್ಲೆಯ ಹೆಸರು	ಜನಸಂಖ್ಯೆ
೧	ಬೆಂಗಳೂರು	೨೦೦೩೬
೨	ಬೆಳಗಾಂ	೪೯೮೪
೩	ಬಳ್ಳಾರಿ	೮೬೫೦
೪	ಬೀದರ್	೩೮೪೧
೫	ಬಿಜಾಪುರ	೪೨೪೭
೬	ಚಿಕ್ಕಮಗಳೂರು	೭೫೨೩
೭	ಚಿತ್ರದುರ್ಗ	೩೬೯೨
೮	ದಕ್ಷಿಣ ಕನ್ನಡ	೮೫೫೮೦
೯	ಧಾರವಾಡ	೩೪೦೬
೧೦	ಗುಲ್ಬರ್ಗ	೯೨೮೭
೧೧	ಹಾಸನ	೪೯೨೫

೧೨.	ಕೊಡಗು	೨೦೯೯
೧೩	ಕೋಲಾರ	೧೧೮೫೫೫
೧೪	ಮಂಡ್ಯ	೧೬೫೭೬
೧೫	ಮೈಸೂರು	೨೮೪೧೫೫
೧೬	ರಾಯಚೂರು	೬೫೯೬
೧೭	ಶಿವಮೊಗ್ಗ	೬೬೨೨
೧೮	ತುಮಕೂರು	೧೦೪೦೦
೧೯	ಉತ್ತರ ಕನ್ನಡ	೧೩೭೦೫
	ಒಟ್ಟು	**೨೫೨೪೪೯**

೩೮೬೨ (೪೩೮೭) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ ಮಹಿಳೆಯರಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು;(ವಿವರ ನೀಡುವುದು)

ಆ) ಹಿಂದುಳಿದ ವರ್ಗಗಳ ನಿರುದ್ಯೋಗಿ ಮಹಿಳೆಯರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಪ್ರಾರಂಭಿಸಿದ ಕೌಶಲ್ಯ ಯೋಜನೆಯಡಿಯಲ್ಲಿ ಬಾಗಲಕೋಟೆ ಕ್ಷೇತ್ರದ ಎಷ್ಟು ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ;

ಇ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಯೋಜನೆಯನ್ನು ಕಾರ್ಯಗತ ಮಾಡಿಕೊಡಲಾಗಿದೆ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

<u>ಹಿಂದುಳಿದ ವರ್ಗಗಳ ಇಲಾಖೆ</u>

ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಹಿಂದುಳಿದ ವರ್ಗ ಗಳ ಮಹಿಳೆಯರಿಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.